ದಿನಾಂಕ :19-12-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಜಿ.ಎನ್.ವಕೀಲರಿಂದಃ-

ನಾನು 7 ನೇ ತರಗತಿ ಓದಿದ್ದೇನೆ. ಈ ಕೇಸನ್ನು ಶಿವಣ್ಣನವರು ಸೀಬನಯ್ಯನ ಮೇಲೆ ಹಾಕಿದ್ದಾರೆ, ಏಕೆ ಕೇಸು ಮಾಡಿದ್ದಾರೆ ಗೊತ್ತಿಲ್ಲ. ಸೀಬನಯ್ಯನ ತಂದೆ ಸಿ.ಬಿ. ರಂಗಯ್ಯನನ್ನು ನಾನು ನೋಡಿಲ್ಲ. ಸೀಬನಯ್ಯನ ತಾಯಿ ಹೆಸರು ನನಗೆ ಗೊತ್ತಿಲ್ಲ. ಸಿ.ಬಿ. ರಂಗಯ್ಯನಿಗೆ ಸೀಬನಯ್ಯ ಒಬ್ಬನೇ ಮಗ ಇಬ್ಬರು ಹೆಣ್ಣು ಮಕ್ಕಳು ಇರಬಹುದು. ದೊಡ್ಡನರಸಮ್ಮ ಮತ್ತು ಗಂಗಾಮಾಳಮ್ಮ ಅವರ ಹೆಣ್ಣು ಮಕ್ಕಳು ಎಂದರೆ ಸರಿ. ಗಂಗಾಮಾಳಮ್ಮ ನಂಜುಂಡಯ್ಯನನ್ನು ಮದುವೆ ಆಗಿದ್ದರು ಎಂದರೆ ಸರಿ. ಗಂಗಾಮಾಳಮ್ಮನಿಗೆ ಗಂಗಣ್ಣ, ನಂಜಪ್ಪ ಮಾಳಮ್ಮ, ಕರಿಯಮ್ಮ ಮತ್ತು ಸಿದ್ದಮ್ಮ ಮಕ್ಕಳು ಎಂದರೆ ಸರಿ. ಗಂಗಣ್ಣ ನ ಮಗ ಶಿವಣ್ಣ ಎಂದರೆ ಸರಿ. ನಂಜಪ್ಪನಿಗೆ ದೊಡ್ಡರಂಗಯ್ಯ ಮತ್ತು ದೊರೇಶ್ ಮಕ್ಕಳು ಎಂದರೆ ಸರಿ. ಸೀಬನಯ್ಯನವರು ಗಂಗಮ್ಮನನ್ನು ಮದುವೆ ಆಗಿದ್ದರು. ಸೀಬನಯ್ಯ ಮತ್ತು ಗಂಗಮ್ಮ ರವರಿಗೆ ನರಸಿಂಹಯ್ಯ ಮತ್ತು ಲೋಕಮ್ಮ ಮಕ್ಕಳು. ನರಸಿಂಹಯ್ಯರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲನೆಯವರು ಮಾಳಮ್ಮ ಎರಡನೆಯವರು ಸಿದ್ದಮ್ಮ ಎಂದರೆ ಸರಿ. ಮಾಳಮ್ಮ ಜೀವಂತ ಇದ್ದಾಗ ಸಿದ್ದಮ್ಮನನ್ನು ಮದುವೆ ಆಗಿಲ್ಲ, ಮಾಳಮ್ಮ ಸತ್ತ ನಂತರ ಮದುವೆ ಆಗಿದ್ದಾರೆ. ಮಾಳಮ್ಮನಿಗೆ ಪಾರ್ವತಮ್ಮ, ವಿಶಾಲಮ್ಮ ಮತ್ತು ಕೆಂಪಮ್ಮ ಮೂರು ಮಕ್ಕಳೆಂದರೆ ಸರಿ. ಸೀಬನಯ್ಯನವರ ಮನೆಯಲ್ಲಿ ಏನೆಲ್ಲಾ ವ್ಯವಹಾರ ಆಗಿದೆ ನನಗೆ ಗೊತ್ತಿಲ್ಲ. 1968 ರಲ್ಲಿ ಅವರ ಕುಟುಂಬದಲ್ಲಿ ಪಾಲು ಪಟ್ಟಿಯಾದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಸರ್ವೆ ನಂ. 154/3 ಇದನ್ನು ಗಂಗಾಮಾಳಮ್ಮ ರವರಿಗೆ ಭಾಗಕ್ಕೆ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ.

ಅಂದರೆ ಗಂಗಾಮಾಳಮ್ಮ ನ ಪರವಾಗಿ ಅವರ ಮಕ್ಕಳು ಗಂಗಯ್ಯ ಮತ್ತು ನಂಜಪ್ಪನಿಗೆ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ನಂತರ ಆಸ್ತಿಯ ಖಾತೆಗಳು ಅವರ ಹೆಸರಿಗೆ ಬಂತು ಎಂದರೆ ಗೊತ್ತಿಲ್ಲ. ಪಾಲು ಪಟ್ಟಿ ಆದ ನಂತರ ಆಸ್ತಿಯ ಸ್ವಾಧೀನ ಗಂಗಯ್ಯ ಮತ್ತು ನಂಜಪ್ಪ ಉಳುಮೆ ಮಾಡಿಕೊಂಡು ಬಂದಿದ್ದಾರೆ ಎಂದರೆ ಅವರು ಮಾಡುತ್ತಾರೆ ಮತ್ತು ಇವರು ಮಾಡುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. ಗಂಗಯ್ಯ ಮತ್ತು ನಂಜಪ್ಪ ತಲಾ 38 ಗುಂಟೆ ಸ್ವಾಧೀನದಲ್ಲಿದ್ದರು ಎಂದರೆ ಗೊತ್ತಿಲ್ಲ. ಗಂಗಯ್ಯ ತನ್ನ 38 ಗುಂಟೆ ಆಸ್ತಿಯನ್ನು ದಿಃ29.09.2018 ರಯಿ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟು ಶಿವಣ್ಣ ಬಿಟ್ಟು ಕೊಟ್ಟರು ಎಂದರೆ ಗೊತ್ತಿಲ್ಲ. ಆ ನಂತರ ಈ ಆಸ್ತಿ ಪೂರ್ತಿ ಶಿವಣ್ಣನಿಗೆ ಬಂತ್ತು ಎಂದರೆ ಗೊತ್ತಿಲ್ಲ. ನಂಜಪ್ಪ ಸುಮಾರು 13 ವರ್ಷದ ಹಿಂದೆ ಮೃತ ಪಟ್ಟಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯ ಖಾತಾ ದಾಖಲೆ ನಾನು ನೋಡಿಲ್ಲ. ದಾವಾ ಆಸ್ತಿಯ ಖಾತೆ ಗಂಗಯ್ಯನ ಹೆಸರಿನಲ್ಲಿದ್ದಾಗ ಅವರು ಅದರ ಮೇಲೆ ಸಾಲ ತೆಗೆದಿದ್ದರು ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಒಂದು ಮನೆ ಇದೆ ಎಂದರೆ ಹೌದು. ಅದು ಕಟ್ಟಿ ಸುಮಾರು 20 ವರ್ಷ ಆಗಿದೆ ಎಂದರೆ ಇರಬಹುದು. ಅದನ್ನು ದೊಡ್ಡರಂಗಯ್ಯ ಕಟ್ಟಿದ್ದಾರೆ ಎಂದರೆ ಸರಿ. ಅದರೊಳಗೆ ಒಂದು ಶಡ್ ಕಟ್ಟಿದ್ದಾರೆ ಎಂದರೆ ಸರಿ. ಅದರಲ್ಲಿ ಒಂದು ಬೋರ್ ವೆಲ್ ಸಹ ಹಾಕಿದ್ದಾರೆ ಎಂದರೆ ಸರಿ. ಅದರಲ್ಲಿ ದೊಡ್ಡರಂಗಯ್ಯ ಅಡಿಕೆ ಸಸಿಗಳನ್ನು ಕಟ್ಟಿದ್ದರು ಎಂದರೆ ಯಾರು ಕಟ್ಟಿದ್ದಾರೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ಅಡಿಕೆ ಗಿಡಗಳು ಈಗ ಫಸಲು ಕೊಡುತ್ತವೆ ಎಂದರೆ ಸರಿ. ದಾವಾ ಆಸ್ತಿಯನ್ನು ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ಅವರು ಇರುತ್ತಾರೆ, ಇವರು ಇರುತ್ತಾರೆ ಎಂದು ಹೇಳುತ್ತಾರೆ. ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಕುಮಾರಯ್ಯ ಕರೆ ತಂದಿದ್ದಾರೆ. ವಾದಿಗಳು ದಾವಾ ಆಸ್ತಿಯ ಸ್ವಾಧೀನದಲ್ಲಿ ಯಾವತ್ತು ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 154 ಮೂಲತಃ 8 ಎಕರೆ ಚಿಲ್ಲರೆ ಇತ್ತು. ಇದು ಮೂಲತಃ ಲಿಂಗಯ್ಯ ಬಿನ್ ಚಿಕ್ಕಗೊರವಯ್ಯ

ಇವರಿಗೆ ಸಂಬಂಧಪಟ್ಟದ್ದು. ಅದರಲ್ಲಿ 2 ಎಕರೆ ಚಿಲ್ಲರೆ ದೊಡ್ಡರಂಗಯ್ಯ ನಿಗೆ ಕೊಟ್ಟಿದ್ದಾರೆ. ಅದನ್ನು ದೊಡ್ಡರಂಗಯ್ಯ ನಿಂದ ಸೀಬನಯ್ಯ ತೆಗೆದುಕೊಂಡಿದ್ದಾರೆ. ಸೀಬನಯ್ಯ,ದೊಡ್ಡನರಸಮ್ಮ ಮತ್ತು ಗಂಗಮಾಳಮ್ಮ ಆಸ್ತಿ ವಿಭಾಗ ಮಾಡಿಕೊಂಡಿದ್ದಾರಾ ನನಗೆ ಗೊತ್ತಿಲ್ಲ. ಸಿ.ಬಿ. ರಂಗಯ್ಯನ ವಂಶಸ್ಥರಿಗೆ ಎಷ್ಟು ಆಸ್ತಿಗಳಿಗೆ ಯಾವ ಊರಿನಲ್ಲಿವೆ ನನಗೆ ಗೊತ್ತಿಲ್ಲ. 1968 ರಲ್ಲಿ ಸೀಬನಯ್ಯ ಕೊಂಡಂತಹ 2 ಎಕರೆ ಆಸ್ತಿಯನ್ನು ಗಂಗಮಾಳಮ್ಮನ ಪರವಾಗಿ ಆಕೆಯ ಮಕ್ಕಳಾದ ಗಂಗಯ್ಯ ಮತ್ತು ನಂಜಪ್ಪ ನವರಿಗೆ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ವಾದಿಯರು ಯಾವತ್ತು ಸ್ವಾಧೀನಲ್ಲಿಲ್ಲ, ಶಿವಣ್ಣ, ದೊಡ್ಡರಂಗಯ್ಯ ಮತ್ತು ದೊರೇಶ್ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿ ವಾದಿಯರು ಸಹ ಇದ್ದಾರೆ ಎಂದು ಹೇಳುತ್ತಾರೆ. ಡಿ.ಡಿ.ಎಲ್.ಆರ್. ಮುಂದೆ ಪೋಡಿ ಆಗಿದ್ದು, ಸರಿ ಇಲ್ಲ ಎಂದು ಪ್ರಶ್ನಿಸಿ ನಾನು ಅರ್ಜಿ ಸಲ್ಲಿಸಿದ್ದೇನೆ ಎಂದು ಹೇಳಿದ್ದು, ಆ ಅರ್ಜಿ ಅಥವಾ ಆದೇಶವನ್ನು ಈ ಕೇಸಿನಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿ. ನಾನು ಮತುತ ಮೋಹನ್ ಕುಮಾರ್ ವಿಶ್ವಾಸದಲ್ಲಿದ್ದೇವೆ ಎಂದರೆ ಸರಿ. ಡಿ.ಡಿ.ಎಲ್.ಆರ್. ಮುಂದೆ ಮೋಹನ್ ಕಮಾರ್ ಮುಂದೆ ನನ್ನ ಕಡೆಯಿಂದ ಈ ಕೇಸ್ ಗೆ ಸಹಾಯವಾಗುವಂತೆ ಒಂದು ಅರ್ಜಿ ಕೊಡಿಸಿದ್ದರು ಎಂದರೆ ಸುಳ್ಳು. ಡಿ.ಡಿ.ಎಲ್.ಆರ್. ಆದೇಶವನ್ನು ಪ್ರತಿವಾದಿಯರು ಪ್ರಶ್ನಿಸಿ ಅಪೀಲ್ ಹೋಗಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿರುವ ಅಡಿಕೆಯನ್ನು ಯಾವಾಗಲೂ ಪ್ರತಿವಾದಿಯರೇ ಕೀಳುತ್ತಾರೆ ಎಂದರೆ ಸಾಕ್ಷಿ ಅವರು ಕೀಳುತ್ತಾರೆ, ಇವರು ಕೀಳುತ್ತಾರೆ ಎಂದು ಹೇಳುತ್ತಾರೆ. ಪ್ರತಿವಾದಿಯರು ದಾವಾ ಆಸ್ತಿ ಮಾರಾಟ ಮಾಡಲು ಹೊರಟಿದ್ದರು ಎಂದು ನಾನು ಹೇಳಿಲ್ಲ. ದಾವಾ ಆಸ್ತಿ 1968 ರಿಂದ ಪ್ರತಿವಾದಿಯರ ಸ್ವಾಧೀನದಲ್ಲಿದ್ದು ಅದು ನನಗೆ ಗೊತ್ತಿದ್ದರು ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿರುವ ಅಡಿಕೆ ಸಸಿಗಳು ನಿಪಿ-31 ರ ಪ್ರಕಾರ ಪ್ರತಿವಾದಿಯರೇ ಅವುಗಳನ್ನು ನೆಟ್ಟು ಬೆಳೆಸಿದ್ದಾರೆ ಎಂದರೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
(ಉಂಡಿ ಮಂಜುಳ ಶಿವಪ್ಪ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫಸಿ, ಗುಬ್ಬಿ